# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1810 |
| ವಿಧಾನ ಪರಿಷತ್ ಸದಸ್ಯರ ಹೆಸರು | : | ಶ್ರೀ ಸಲೀಂ ಅಹಮದ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವವರು | : | ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಮತ್ತು ಸಾರ್ವಜನಿಕ ವಲಯ ಉದ್ಯಮಗಳ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 15.03.2022 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗಾಗಿ ಸರ್ಕಾರ ರೂಪಿಸಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. |
| ಆ) | ಸಣ್ಣ ಕೈಗಾರಿಕೆಗಳ ಉದ್ದಿಮೆದಾರರಿಗೆ ಸರ್ಕಾರದ ವತಿಯಿಂದ ಸಹಾಯಧನ ನೀಡುವ ಯೋಜನೆ ಇದೆಯೇ; | ಸಣ್ಣ ಕೈಗಾರಿಕೆಗಳ ಉದ್ದಿಮೆದಾರರಿಗೆ ಸರ್ಕಾರದ ವತಿಯಿಂದ ವಿವಿಧ ಯೋಜನೆಗಳಡಿಯಲ್ಲಿ ಸಹಾಯಧನ ನೀಡಲಾಗುತ್ತಿದ್ದು ಅವುಗಳ ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. |
| ಇ) | ಕಡಿಮೆ ಬಡ್ಡಿ ದರದಲ್ಲಿ ಸಣ್ಣ ಕೈಗಾರಿಕೆಗಳ ಉದ್ದಿಮೆದಾರರಿಗೆ ಬ್ಯಾಂಕ್ ಸಾಲವನ್ನು ನೀಡುವ ಪ್ರಸ್ತಾಪ ಸರ್ಕಾರದ ಮುಂದೆ ಇದೆಯೇ; | ಬ್ಯಾಂಕ್ ಗಳು ರಾಜ್ಯ ಸರ್ಕಾರದ ನಿಯಂತ್ರಣದಲ್ಲಿ ಇರುವುದಿಲ್ಲ. ಅವು ಭಾರತೀಯ ರಿಸರ್ವ್ ಬ್ಯಾಂಕ್ ನ ನಿಯಂತ್ರಣದಲ್ಲಿ ಕಾರ್ಯ ನಿರ್ವಹಿಸುತ್ತವೆ. ಅವು ಸಣ್ಣ ಕೈಗಾರಿಕೆಗಳ ಉದ್ದಿಮೆದಾರರಿಗೆ ಆರ್.ಬಿ.ಐ ನಿಯಮದಂತೆ ಬಡ್ಡಿಯನ್ನು ವಿಧಿಸುತ್ತವೆ. ರಾಜ್ಯ ಸರ್ಕಾರವು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಮೂಲಕ ಸಾಲ ಪಡೆಯುವ ಸಣ್ಣ ಉದ್ದಿಮೆದಾರರಿಗೆ ಶೇ 6% ಬಡ್ಡಿ ಸಹಾಯಧನವನ್ನು ನೀಡುತ್ತಿದೆ. |
| ಈ) | ಕೋವಿಡ್ ನಿಂದ ನಷ್ಟ ಹೊಂದಿರುವ ಸಣ್ಣ ಉದ್ದಿಮೆದಾರರಿಗೆ ಸರ್ಕಾರ ಸಹಾಯ ಮಾಡಲು ಘೋಷಿಸಿರುವ ಯೋಜನೆಗಳು ಯಾವುವು? | ರಾಜ್ಯದಲ್ಲಿ ಕೋವಿಡ್ ಸೋಂಕು ಹರಡುವಿಕೆ ಹಿನ್ನೆಲೆಯಲ್ಲಿ ವಿಧಿಸಲಾದ ಸಂಪೂರ್ಣ ಲಾಕ್‌ಡೌನ್‌ನಿಂದ ಬಹಳಷ್ಟು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು ನಷ್ಟ ಹೊಂದಿರುತ್ತವೆ.<br><br>ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಇವುಗಳನ್ನು ಪುನ:ಶ್ಚೇತನಗೊಳಿಸಲು ಹಮ್ಮಿಕೊಂಡಿರುವ ಯೋಜನೆಗಳು ಈ ಕೆಳಗಿನಂತಿವೆ.<br><br>**ಕೇಂದ್ರ ಸರ್ಕಾರದ ಯೋಜನೆ:**<br><br>ಕೇಂದ್ರ ಸರ್ಕಾರ ಘೋಷಿಸಿರುವ "ಆತ್ಮ ನಿರ್ಭರ ಭಾರತ ಅಭಿಯಾನ" ದ ಅಡಿಯಲ್ಲಿ ಅತೀ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳನ್ನು ಪುನಶ್ಚೇತನಗೊಳಿಸಲು ಮತ್ತು ಉದ್ಯಮಗಳಿಗೆ ಆರ್ಥಿಕ ನೆರವು ನೀಡುವ ಯೋಜನೆಯಲ್ಲಿ ಈ ಕೆಳಗಿನ ನೆರವು ದೊರೆತಿದೆ. |

ಭಾರತ ಸರ್ಕಾರವು "ಇ.ಸಿ.ಎಲ್.ಜಿ"-ಎಮರ್ಜೆನ್ಸಿ ಕ್ರೆಡಿಟ್ ಲೈನ್ ಗ್ಯಾರಂಟಿ ಯೋಜನೆಯನ್ನು ಜಾರಿಗೆ ತಂದಿದ್ದು ಇದರನ್ವಯ ಫೆಬ್ರವರಿ 2020 ರ ಅಂತ್ಯಕ್ಕೆ ಬ್ಯಾಂಕ್‌ಗಳಲ್ಲಿ ಬಾಕಿ ಇರುವ ಎಂ.ಎಸ್.ಎಂ.ಇ ಘಟಕಗಳ ಸಾಲದ ಮೊತ್ತಕ್ಕೆ ಶೇ 20% ರಷ್ಟು ಹೆಚ್ಚುವರಿ ಸಾಲವನ್ನು ಯಾವುದೇ ಹೆಚ್ಚುವರಿ ಖಾತರಿ ಇಲ್ಲದೇ ನೀಡುವ ಯೋಜನೆಯನ್ನು ಜಾರಿಗೆ ತಂದಿರುತ್ತದೆ.

**ರಾಜ್ಯ ಸರ್ಕಾರದ ಯೋಜನೆ:**

ಕೊರೋನದಿಂದ ಸಂಕಷ್ಟದಲ್ಲಿರುವ ಸಣ್ಣ ಕೈಗಾರಿಕೆಗಳಿಗೆ ರಾಜ್ಯ ಸರ್ಕಾರದಿಂದ ಈ ಕೆಳಗಿನ ಯೋಜನೆ ರೂಪಿಸಲಾಗಿರುತ್ತದೆ.

1. ಇಂಧನ ಇಲಾಖೆಯು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಏಪ್ರಿಲ್ ಮತ್ತು ಮೇ 2020 ತಿಂಗಳ ಬೇಡಿಕೆ ಶುಲ್ಕ ಮತ್ತು ಸ್ಥಿರ ಶುಲ್ಕವನ್ನು ಮನ್ನಾ ಮಾಡಿರುತ್ತದೆ.
2. ಇಂಧನ ಇಲಾಖೆಯು ವಿದ್ಯುತ್ ಬಿಲ್‌ನ್ನು ಪ್ರಾಮಾಣಿಕವಾಗಿ ನಿಗದಿತ ಅವಧಿಯೊಳಗೆ ಪಾವತಿಸುವ ಕೈಗಾರಿಕೆಗಳಿಗೆ ರಿಯಾಯಿತಿಯನ್ನು ನೀಡಿರುತ್ತದೆ. ಹೆಚ್‌ಟಿ ಗರಿಷ್ಠ ಮಿತಿ ರೂ.1 ಲಕ್ಷ, ಎಲ್‌ಟಿ ಗರಿಷ್ಠ ಮಿತಿ ರೂ.10,000/-

| | |
|---|---|
| 1 ರಿಂದ 5 ದಿನದೊಳಗೆ ಪಾವತಿಸಿದಲ್ಲಿ | ಶೇ 1% ರಿಯಾಯಿತಿ |
| 6 ರಿಂದ 15 ದಿನದೊಳಗೆ ಪಾವತಿಸಿದಲ್ಲಿ | ಶೇ 0.5% ರಿಯಾಯಿತಿ |
| 15 ರಿಂದ 30 ದಿನದೊಳಗೆ ಪಾವತಿಸಿದಲ್ಲಿ | ಯಾವುದೇ ರಿಯಾಯಿತಿ ಇರುವುದಿಲ್ಲ. |

3. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಉದ್ಯಮಶೀಲರು ತಮಗೆ ಹಂಚಿಕೆಯಾದ ನಿವೇಶನಗಳ ಕಂತು ಮಾರ್ಚ್, ಏಪ್ರಿಲ್ ಮತ್ತು ಮೇ 2020 ತಿಂಗಳಲ್ಲಿ ಪಾವತಿಸದಿದ್ದಲ್ಲಿ ಆ ಪಾವತಿಯನ್ನು ಕ್ರಮವಾಗಿ 3 ತಿಂಗಳು ಮುಂದೂಡಲಾಗಿದೆ ಮತ್ತು ಈ ಮೊತ್ತಕ್ಕೆ ಯಾವುದೇ ಬಡ್ಡಿಯನ್ನು ವಿಧಿಸುವುದಿಲ್ಲ.

4. ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮವು ಉದ್ಯಮಶೀಲರು ತಮಗೆ ಹಂಚಿಕೆಯಾದ ನಿವೇಶನಗಳ ಕಂತು, ಮಳಿಗೆಗಳ ಬಾಡಿಗೆ ಮತ್ತು ನೀರಿನ ಶುಲ್ಕಗಳ 2020ರ ಏಪ್ರಿಲ್, ಮೇ ಮತ್ತು ಜೂನ್ ತಿಂಗಳುಗಳ ಕಂತನ್ನು ಈ ಕೆಳಗಿನಂತೆ ಪಾವತಿಸಲು ಅವಕಾಶ ಕಲ್ಪಿಸಲಾಗಿದೆ. ಇದಕ್ಕೆ ಯಾವುದೇ ಬಡ್ಡಿಯನ್ನು ವಿಧಿಸಲಾಗುವುದಿಲ್ಲ.

| | |
|---|---|
| ಏಪ್ರಿಲ್ 2020 ತಿಂಗಳ ಕಂತು | ಜೂನ್ 2020 ತಿಂಗಳ ಕಂತಿನ ಜೊತೆ ಪಾವತಿಸತಕ್ಕದ್ದು. |
| ಮೇ 2020 ತಿಂಗಳ ಕಂತು | ಜುಲೈ 2020 ತಿಂಗಳ ಕಂತಿನ ಜೊತೆ ಪಾವತಿಸತಕ್ಕದ್ದು. |
| ಜೂನ್ 2020 ತಿಂಗಳ ಕಂತು | ಆಗಸ್ಟ್ 2020 ತಿಂಗಳ ಕಂತಿನ ಜೊತೆ ಪಾವತಿಸತಕ್ಕದ್ದು. |

ಕೊರೋನಾ 2ನೇ ಅಲೆಯ ನಂತರ ರಾಜ್ಯ ಸರ್ಕಾರದ ಇಂಧನ ಇಲಾಖೆಯು ದಿನಾಂಕ 21.06.2021 ರ ಆದೇಶದಂತೆ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಪಾವತಿಸಬೇಕಾದ ಮೇ ಮತ್ತು ಜೂನ್ 2021 ತಿಂಗಳ ಬೇಡಿಕೆ/ ನಿಗದಿತ ಶುಲ್ಕವನ್ನು ಮನ್ನಾ ಮಾಡಿರುತ್ತದೆ.

ಸಿಐ 50 ಎಸ್ ಎಸ್ ಐ 2022

(ಎನ್.ನಾಗರಾಜು (ಎಂ.ಟಿ.ಬಿ))
ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ
ಸಾರ್ವಜನಿಕ ವಲಯ ಉದ್ಯಮಗಳ ಸಚಿವರು



Generated from eOffice by NAGARAJ MTB, C&I-MIN(NMTB), MINISTER, C&I SEC on 11/03/2022 09:55 AM

# ಶ್ರೀ ಸಲೀಂ ಅಹಮದ್ ವಿಧಾನ ಪರಿಷತ್ ಸದಸ್ಯರು ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 1599 (1810) ಗೆ ಅನುಬಂಧ-1

## ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗಾಗಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಜಾರಿಗೊಳಿಸುತ್ತಿರುವ ವಿವಿಧ ಯೋಜನೆಗಳು

1. **ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನ ಯೋಜನೆ** : (ಕೇಂದ್ರ ಸರ್ಕಾರ)

ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನೆ ಯೋಜನೆಯ (ಪಿಎಂಇಜಿಪಿ) ಮುಖ್ಯ ಉದ್ದೇಶ, ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ, ಸ್ಥಳೀಯ ಸಂಪನ್ಮೂಲಗಳ ಆಧಾರಿಸಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಿ (ಸೇವಾ ಕ್ಷೇತ್ರ ಮತ್ತು ಉತ್ಪಾದನಾ ಕ್ಷೇತ್ರ) ವಿದ್ಯಾವಂತ ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ ಕಲ್ಪಿಸುವುದು. ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನ ಯೋಜನೆಯಡಿಯಲ್ಲಿ (ಪಿಎಂಇಜಿಪಿ) ಉತ್ಪಾದನಾ ಚಟುವಟಿಕೆಗೆ ಗರಿಷ್ಠ 25 ಲಕ್ಷಗಳ ಯೋಜನ ವೆಚ್ಚದವರೆಗೂ ಹಾಗೂ ಸೇವಾ ಚಟುವಟಿಕೆಗೆ ಗರಿಷ್ಠ 10 ಲಕ್ಷಗಳ ಯೋಜನ ವೆಚ್ಚದವರೆಗೂ ಬ್ಯಾಂಕ್ ಮುಖಾಂತರ ಸಾಲ ಸೌಲಭ್ಯ ಒದಗಿಸಲಾಗುವುದು.

1. **ತಯಾರಿಕಾ ಚಟುವಟಿಕೆಗಳಿಗೆ ಗರಿಷ್ಠ ಯೋಜನ ವೆಚ್ಚ** : ರೂ.25.00ಲಕ್ಷ
2. **ಸೇವಾ ಚಟುವಟಿಕೆಗಳಿಗೆ ಗರಿಷ್ಠ ಯೋಜನ ವೆಚ್ಚ** : ರೂ.10.00ಲಕ್ಷ
3. **ಶೈಕ್ಷಣಿಕ ವಿದ್ಯಾರ್ಹತೆ:** ಈ ಯೋಜನೆಯಡಿಯಲ್ಲಿ ತಯಾರಿಕಾ ಚಟುವಟಿಕೆಗಳ ಯೋಜನಾ ವೆಚ್ಚ ರೂ.10.00 ಲಕ್ಷ ಮತ್ತು ಅದಕ್ಕಿಂತ ಮೇಲ್ಪಟ್ಟ ಯೋಜನೆಗಳನ್ನು ಹಾಗೂ ಸೇವಾ ಚಟುವಟಿಕೆಗಳ ಯೋಜನಾ ವೆಚ್ಚ ರೂ.5.00 ಲಕ್ಷ ಮತ್ತು ಅದಕ್ಕಿಂತ ಮೇಲ್ಪಟ್ಟ ಯೋಜನೆಗಳನ್ನು ಸ್ಥಾಪಿಸಲು ಅಭ್ಯರ್ಥಿಗಳು ಕನಿಷ್ಠ ವಿದ್ಯಾರ್ಹತೆ 8ನೇ ತರಗತಿ ಉತ್ತೀರ್ಣರಾಗಿರಬೇಕು.
4. **ವಯಸ್ಸು** : ಕನಿಷ್ಠ 18 ವರ್ಷ ತುಂಬಿರಬೇಕು
5. **ಪ್ರವರ್ತಕರ ವಂತಿಕೆ:**
   ಸಾಮಾನ್ಯ ವರ್ಗದ ಉದ್ಯಮಶೀಲರು ಯೋಜನಾ ವೆಚ್ಚದ ಶೇ 10% ರಷ್ಟು ಬಂಡವಾಳವಾಗಿ ತೊಡಗಿಸಬೇಕು. ಉದ್ಯಮಶೀಲರು ಪ.ಜಾತಿ/ ಪ.ಪಂಗಡ / ಹಿಂದುಳಿದ ವರ್ಗ/ ಅಲ್ಪಸಂಖ್ಯಾತ /ಮಾಜಿ ಸೈನಿಕ / ಅಂಗವಿಕಲ/ ಮಹಿಳೆ ಆಗಿದ್ದಲ್ಲಿ ಯೋಜನಾ ವೆಚ್ಚದ ಶೇ 5% ರಷ್ಟು ಬಂಡವಾಳ ತೊಡಗಿಸಬೇಕು.
6. **ಸರ್ಕಾರದಿಂದ ಸಹಾಯಧನ (ರೂ.ಲಕ್ಷಗಳಲ್ಲಿ)**

| ಫಲಾನುಭವಿಗಳ ವರ್ಗೀಕರಣ | ಯೋಜನಾ ವೆಚ್ಚದಲ್ಲಿ ಪ್ರವರ್ತಕರ ವಂತಿಗೆ | ಯೋಜನಾ ವೆಚ್ಚದ ಮೇಲೆ ಅರ್ಹತೆಯಿರುವ ಸಹಾಯಧನ | |
|---|---|---|---|
| | | ನಗರ | ಗ್ರಾಮೀಣ |
| ಸಾಮಾನ್ಯ ವರ್ಗ | ಶೇ.10% | ಶೇ. 15% (ಗರಿಷ್ಟ ರೂ.3.75ಲಕ್ಷ) | ಶೇ. 25% (ಗರಿಷ್ಟ ರೂ. 6.25 ಲಕ್ಷ) |
| ವಿಶೇಷ ವರ್ಗ (ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ ಹಿಂದುಳಿದವರು/ ಅಲ್ಪಸಂಖ್ಯಾತರು/ ಮಹಿಳೆ/ ಮಾಜಿಯೋಧರು/ ಅಂಗವಿಕಲರು) | ಶೇ.5% | ಶೇ. 25% (ಗರಿಷ್ಟ ರೂ.6.25ಲಕ್ಷ) | ಶೇ. 35% (ಗರಿಷ್ಟ ರೂ. 8.75 ಲಕ್ಷ) |

7. **ಆದಾಯದ ಮಿತಿ:** ಈ ಯೋಜನೆಯಡಿಯಲ್ಲಿ ಉದ್ದಿಮೆಗಳನ್ನು ಸ್ಥಾಪಿಸಲು ಸಾಲ ಸೌಲಭ್ಯ ಪಡೆಯಲು ಯಾವುದೇ ಆದಾಯದ ಮಿತಿ ಇರುವುದಿಲ್ಲ.
8. **ಇತರೆ ಷರತ್ತುಗಳು:** ಈ ಯೋಜನೆಯಡಿಯಲ್ಲಿ ಪ್ರಥಮ ಪೀಳಿಗೆ ಉದ್ಯಮಶೀಲರುಗಳು ಪ್ರಾರಂಭಿಸುವ ಹೊಸ ಘಟಕಗಳಿಗೆ ಮಾತ್ರ ಸಹಾಯಧನ ಲಭ್ಯವಿದೆ.

2. **ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ಹೊಸ ಹೂಡಿಕೆಗಾಗಿ ಸಾಲ ಪಡೆದು ಸ್ಥಾಪನೆಗೊಳ್ಳುವ ಸೂಕ್ಷ್ಮ ಮತ್ತು ಸಣ್ಣ ಉತ್ಪಾದನಾ ಕೈಗಾರಿಕೆಗಳಿಗೆ ಶೇ 6% ಬಡ್ಡಿ ಸಹಾಯಧನ ಯೋಜನೆ**

1. ಯೋಜನೆಯ ಅನ್ವಯ :



Generated from eOffice by NAGARAJ MTB, C&I-MIN(NMTB), MINISTER, C&I SEC on 11/03/2022 09:55 AM

1. ಈ ಯೋಜನೆಯು ಕೆ.ಎಸ್.ಎಫ್.ಸಿ ಯಿಂದ **ವಿಸ್ತರಣೆ / ಆಧುನೀಕರಣ / ವೈರುಧ್ಧೀಕರಣ / ತಾಂತ್ರಿಕ ಉನ್ನತೀಕರಣ ಮೂಲಕ ಕಟ್ಟಣ ಮತ್ತು ಯಂತ್ರೋಪಕರಣಗಳಲ್ಲಿ** ಹೂಡಿಕೆಗಾಗಿ ಸಾಲ ಪಡೆಯುವ ಸೂಕ್ಷ್ಮ ಮತ್ತು ಸಣ್ಣ ಉತ್ಪಾದನಾ ಕೈಗಾರಿಕಾ ಘಟಕಗಳಿಗೆ ಮಾತ್ರ ಅನ್ವಯಿಸುತ್ತದೆ.
2. ಕರ್ನಾಟಕ ಸರ್ಕಾರ/ ಭಾರತ ಸರ್ಕಾರದ ಯಾವುದೇ ಯೋಜನೆಯಡಿ ಬಡ್ಡಿ ಸಹಾಯಧನ ಪಡೆದ ಘಟಕಗಳು ಈ ಯೋಜನೆಯಡಿ ಸೌಲಭ್ಯ ಪಡೆಯಲು ಅರ್ಹವಿರುವುದಿಲ್ಲ.
3. ಈ ಯೋಜನೆಯು ದುಡಿಮೆ ಬಂಡವಾಳ ಸಾಲಕ್ಕೆ ಅನ್ವಯಿಸುವುದಿಲ್ಲ.

**2. ಸಾಲದ ಮೊತ್ತ :**

1. **ಸೂಕ್ಷ್ಮ ಮತ್ತು ಸಣ್ಣ ಉತ್ಪಾದನಾ ಘಟಕಗಳಿಗೆ** : ರೂ.500.00 ಲಕ್ಷ ಅವಧಿ ಸಾಲ (ಕಟ್ಟಡ ಮತ್ತು ಉತ್ಪಾದನೆಗೆ ನೇರವಾಗಿ ಉಪಯೋಗಿಸುವ ಯಂತ್ರೋಪಕರಣ ಮೇಲೆ)
2. ಸೂಕ್ಷ್ಮ ಮತ್ತು ಸಣ್ಣ ಉತ್ಪಾದನಾ ಕೈಗಾರಿಕೆಗಳಿಗೆ ಸಾಲದ ಮೊತ್ತವು ರೂ.500.00 ಲಕ್ಷ ಮೀರಿದಲ್ಲಿ, ಬಡ್ಡಿ ಸಹಾಯಧನಕ್ಕೆ ಸಾಲದ ಮೊತ್ತವನ್ನು ರೂ.500.00 ಲಕ್ಷಗಳವರೆಗೆ ಪರಿಗಣಿಸಿ, ಹೆಚ್ಚುವರಿ ಸಾಲದ ಮೊತ್ತಕ್ಕೆ ಕೆ.ಎಸ್.ಎಫ್.ಸಿಯ ಒಪ್ಪಂದಿತ ಬಡ್ಡಿದರ (contract rate of interest) ವಿಧಿಸಲಾಗುವುದು.
3. ಘಟಕವು ಕೆ.ಎಸ್.ಎಫ್.ಸಿ ಯಿಂದ 'ಕಾಂಪೋಸಿಟ್ ಸಾಲ' ಪಡೆದಿದ್ದಲ್ಲಿ ಅದರಲ್ಲಿ 'ಅವಧಿ ಸಾಲ'ದ ಮೊತ್ತ ಅನ್ವಯವಾಗುವ ಕಟ್ಟಡ ಮತ್ತು ಉತ್ಪಾದನೆಗೆ ನೇರವಾಗಿ ಉಪಯೋಗಿಸುವ ಯಂತ್ರೋಪಕರಣ ಮೇಲೆ ಅನ್ವಯಿಸುತ್ತದೆ.

3. **ಸಹಾಯಧನದ ಬಿಡುಗಡೆ :** ಬಡ್ಡಿ ಸಹಾಯಧನವನ್ನು ಮುಂಗಡವಾಗಿ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಗೆ ನೇರವಾಗಿ ಬಿಡುಗಡೆ ಮಾಡುವುದು. ಈ ಬಡ್ಡಿ ಸಹಾಯಧನವನ್ನು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ಅರ್ಹ ಘಟಕಗಳಿಗೆ ಆಯಾ ತಿಂಗಳು ಸರ್ಕಾರ ಬಿಡುಗಡೆ ಮಾಡಿದ ಅನುದಾನದಿಂದ ಭರಿಸುವುದು.

## ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ವರ್ಗದ ಅಭಿವೃದ್ಧಿಗೆ ಇರುವ ಕಾರ್ಯಕ್ರಮಗಳು:

**1. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ/ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತರವರಿಂದ ಹಂಚಿಕೆಯಾಗುವ ನಿವೇಶನ/ಪ್ಲಾಟ್/ಶೆಡ್‌ಗಳಿಗೆ ರಿಯಾಯಿತಿ**

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ಉದ್ದಿಮೆದಾರರಿಗೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ/ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮಗಳಿಂದ ಹಂಚಿಕೆಯಾಗುವ ಕೈಗಾರಿಕಾ ನಿವೇಶನ/ಪ್ಲಾಟ್/ಶೆಡ್‌ಗಳನ್ನು ಶೇ.75 ರಷ್ಟು ರಿಯಾಯಿತಿ ದರದಲ್ಲಿ ನೀಡಲಾಗುತ್ತಿದೆ.

**2. ಗುಡಿ ಮತ್ತು ಸೂಕ್ಷ್ಮ ಕೈಗಾರಿಕಾ ಘಟಕಗಳು/ಕುಶಲಕರ್ಮಿಗಳಿಗೆ ಬ್ಯಾಂಕಿನ ಸಾಲದ ಮೇಲೆ ಶೇ.60 ಸಹಾಯಧನ ಕಾರ್ಯಕ್ರಮ**

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಫಲಾನುಭವಿಗಳು ಗುಡಿ ಮತ್ತು ಅತೀ ಸೂಕ್ಷ್ಮ ಕೈಗಾರಿಕಾ ಘಟಕಗಳ ಸ್ಥಾಪನೆಗೆ ಹಣಕಾಸು ಸಂಸ್ಥೆಗಳಿಂದ ಸಾಲದ ಮಂಜೂರಾತಿ ಪಡೆದ ನಂತರ ಇಲಾಖೆಯಿಂದ ಈ ಯೋಜನೆಯಡಿ ಅರ್ಹ ಸಹಾಯಧನ ಮಂಜೂರು ಮಾಡಿ, ಸಾಲದ ಮೊದಲನೇ ಕಂತು ಬಿಡುಗಡೆಯಾದ ಮೇಲೆ ಸದರಿ ಸಹಾಯಧನ ಮೊತ್ತವನ್ನು ಸಂಬಂಧಪಟ್ಟ ಬ್ಯಾಂಕ್/ಹಣಕಾಸು ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗುವುದು. ಯೋಜನಾ ವೆಚ್ಚದ ಶೇ.90 ರಷ್ಟನ್ನು ಹಣಕಾಸು ಸಂಸ್ಥೆ / ವಾಣಿಜ್ಯ ಬ್ಯಾಂಕ್‌ಗಳು, ರೀಜನಲ್ ರೂರಲ್ ಬ್ಯಾಂಕ್ (ಪತ್ತಿನ ಸಹಕಾರ ಸಂಘಗಳನ್ನು ಹೊರತುಪಡಿಸಿ) ಗಳಿಂದ ಯೋಜನೆಗೆ ಪಡೆಯುವುದು. ಮಂಜೂರಾದ ಸಾಲದ ಮೇಲೆ, ಇಲಾಖೆ ವತಿಯಿಂದ ರೂ.10.00ಲಕ್ಷ ಮೀರದಂತೆ ಇರುವ ಯೋಜನೆಗಳಿಗೆ ಯೋಜನಾ ವೆಚ್ಚದ ಮೇಲೆ ಶೇ.60 ರಷ್ಟು ಗರಿಷ್ಠ ರೂ.5.00 ಲಕ್ಷಗಳವರೆಗೂ ಸಹಾಯಧನವನ್ನು ಮಂಜೂರು ಮಾಡಲಾಗುವುದು.

3. **ಕೌಶಲ್ಯಾಭಿವೃದ್ಧಿ ತರಬೇತಿ ಕೇಂದ್ರ/ಸಾಮಾನ್ಯ ಸೌಲಭ್ಯ ಕೇಂದ್ರಗಳ ಸ್ಥಾಪನೆ ಕಾರ್ಯಕ್ರಮ**

ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳು ಸ್ಥಾಪಿಸುವ ಕೈಗಾರಿಕಾ ಸಂಘ / ಸಂಸ್ಥೆ / ಟ್ರಸ್ಟ್ ಅಥವಾ ಶೇಕಡ 51 ಕ್ಕಿಂತ ಹೆಚ್ಚು ಇರುವ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಸದಸ್ಯರನ್ನು ಒಳಗೊಂಡ ಇತರೆ ಸಂಘ/ ಸಂಸ್ಥೆಗಳಿಗೆ ಕೌಶಲ್ಯಾಭಿವೃದ್ಧಿ ತರಬೇತಿ ಕೇಂದ್ರಗಳನ್ನು / ಸಾಮಾನ್ಯ ಸೌಲಭ್ಯ ಕೇಂದ್ರಗಳ ಸ್ಥಾಪನೆಗೆ ಸಂಬಂಧಪಟ್ಟಂತೆ ಕಟ್ಟಡ ನಿರ್ಮಾಣ ಮತ್ತು ಯಂತ್ರೋಪಕರಣ / ಉಪಕರಣಗಳ ಖರೀದಿಗೆ ಅನುದಾನವನ್ನು ನೀಡಲಾಗುವುದು.

ಯೋಜನೆಯಡಿ ಅನುದಾನದ ಮಿತಿ:



Generated from eOffice by NAGARAJ MTB, C&I-MIN(NMTB), MINISTER, C&I SEC on 11/03/2022 09:55 AM

ಕೌಶಲ್ಯಾಭಿವೃದ್ಧಿ ತರಬೇತಿ ಕೇಂದ್ರ/ಸಾಮಾನ್ಯ ಸೌಲಭ್ಯ ಕೇಂದ್ರಗಳ ಸ್ಥಾಪನೆಗೆ ಯೋಜನಾ ವೆಚ್ಚದ ಮೇಲೆ ಶೇ. 60 ರಷ್ಟು ಅಥವಾ ಗರಿಷ್ಠ ರೂ.20.00 ಲಕ್ಷಗಳವರೆವಿಗೂ ಈ ಕೆಳಕಂಡಂತೆ ಅನುದಾನ ಪಡೆಯಲು ಅರ್ಹವಿರುತ್ತದೆ.

ಕಟ್ಟಡ ನಿರ್ಮಾಣ: ಕಟ್ಟಡದ ವೆಚ್ಚದ ಶೇಕಡ 60 ರಷ್ಟು ಅಥವಾ ಗರಿಷ್ಠ ರೂ.12.00 ಲಕ್ಷಗಳವರೆಗೂ ಕಟ್ಟಡ ನಿರ್ಮಾಣಕ್ಕೆ ಅನುದಾನ ನೀಡಲಾಗುವುದು. ಉಳಿದ ಕಟ್ಟಡದ ವೆಚ್ಚವನ್ನು ಸಂಸ್ಥೆಯೆ ಸಂಪೂರ್ಣವಾಗಿ ಭರಿಸುವುದು.

ಯಂತ್ರೋಪಕರಣ / ಉಪಕರಣಗಳ ಖರೀದಿಗೆ: ಯಂತ್ರೋಪಕರಣ / ಉಪಕರಣಗಳ ವೆಚ್ಚದ ಶೇ. 60 ರಷ್ಟು ಅಥವಾ ಗರಿಷ್ಠ ರೂ.8.00 ಲಕ್ಷಗಳವರೆಗೂ ಯಂತ್ರೋಪಕರಣ/ಉಪಕರಣಗಳ ಖರೀದಿಗೆ ಅನುದಾನ ನೀಡಲಾಗುವುದು. ಉಳಿದ ಯಂತ್ರೋಪಕರಣಗಳ ವೆಚ್ಚವನ್ನು ಸಂಸ್ಥೆಯೇ ಭರಿಸುವುದು.

**4. ಸಣ್ಣ/ಅತಿ ಸಣ್ಣ ಕೈಗಾರಿಕೆಗಳಿಗೆ "ಡಿ" ಮಾದರಿಯ ಮಳಿಗೆಯ ವೆಚ್ಚದ ಮೇಲೆ ರಿಯಾಯಿತಿ ದರದಲ್ಲಿ ಹಂಚಿಕೆ ಮಾಡುವ ಕಾರ್ಯಕ್ರಮ**

ಸಣ್ಣ ಅತೀ ಸಣ್ಣ ಕೈಗಾರಿಕೆ ಸ್ಥಾಪಿಸಲು ಶೇ.75 ರಷ್ಟು ರಿಯಾಯಿತಿ ದರದಲ್ಲಿ ಮಳಿಗೆಗಳನ್ನು ಕೆಎಸ್ಎಸ್ಐಡಿಸಿ ವತಿಯಿಂದ ಕೈಗಾರಿಕಾ ವಸಾಹಾತುವಿನಲ್ಲಿ ನಿರ್ಮಾಣ ಮಾಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಉದ್ಯಮಶೀಲರಿಗೆ ಕೈಗಾರಿಕಾ ಸ್ಥಾಪನೆಗಾಗಿ ಹಂಚಿಕೆ ಮಾಡಲಾಗುವುದು.

**5. ಅತೀ ಸಣ್ಣ/ಸಣ್ಣ ಕೈಗಾರಿಕಾ ಘಟಕಗಳಿಗೆ ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ:**

ಈ ಯೋಜನೆಯಡಿ ಪ.ಜಾ/ಪ.ಪಂ. ಉದ್ಯಮಿದಾರರು ಬ್ಯಾಂಕ್/ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದು ಹೊಸ ಘಟಕ ಸ್ಥಾಪಿಸುವ ಮೊದಲ ಪೀಳಿಗೆ ಉದ್ದಿಮೆದಾರಿಗೆ ಒಟ್ಟು ಯೋಜನಾ ವೆಚ್ಚದ ಸ್ಥಿರಾಸ್ಥಿಯ ಮೇಲಿನ ಬಂಡವಾಳ ಹೂಡಿಕೆಯಲ್ಲಿ The Debt Equity Ratio 2:1 ಪ್ರಕಾರ (2/3 ರಷ್ಟು ಬ್ಯಾಂಕ್/ ಹಣಕಾಸು ಸಂಸ್ಥೆಗಳಿಂದ ಸಾಲ ಮತ್ತು 1/3 ಪ್ರವರ್ತಕರ ಬಂಡವಾಳ) ಘಟಕಕ್ಕೆ ಪ್ರವರ್ತಕ ಬಂಡವಾಳ ಹೂಡಿಕೆಯ 1/3 ರಲ್ಲಿ ಶೇ.50 ರಷ್ಟು ಬಡ್ಡಿ ರಹಿತ ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ ನೀಡಲಾಗುವುದು.

**ಅರ್ಹ ಸಹಾಯಧನ ಮೊತ್ತ:**

ಅತಿ ಸಣ್ಣ ಮತ್ತು ಸಣ್ಣ ಘಟಕದ ವೆಚ್ಚ (ಯೋಜನಾ ವೆಚ್ಚ / ಸ್ಥಿರಾಸ್ಥಿ ಮೇಲಿನ ಬಂಡವಾಳ ಹೂಡಿಕೆ) ರೂ.5.00 ಕೋಟಿಗೆ ಮೀರದ ಪ್ರಸ್ತಾವನೆಗಳಿಗೆ ಗರಿಷ್ಠ ರೂ. 75.00 ಲಕ್ಷಗಳ ವರೆಗೆ ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ ನೀಡಲಾಗುವುದು.

**ಮಂಜೂರಾತಿ ಸಮಿತಿ:**

ಪರಿಶೀಲನಾ ಸಭೆಯಲ್ಲಿ ಶಿಫಾರಸ್ಸಾದ ಘಟಕಗಳಿಗೆ ವಿವರವಾಗಿ ಪರಿಶೀಲಿಸಿದ ನಂತರ ಮಂಜೂರಾತಿ ಸಮಿತಿ ಸಭೆಯಲ್ಲಿ ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ ಮಂಜೂರಾತಿ ಮಾಡಲಾಗುವುದು.

**6. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಅಧ್ಯಯನ ಪ್ರವಾಸ:**

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ದಿಮೆದಾರರು ತಮ್ಮ ಕೈಗಾರಿಕೆ ಚಟುವಟಿಕೆಯನ್ನು ಅಭಿವೃದ್ಧಿಪಡಿಸಲು/ ಆಧುನಿಕ / ತಾಂತ್ರಿಕ ನೈಪುಣ್ಯತೆ ಹೊಂದಲು ಹಾಗೂ ಮಾರುಕಟ್ಟೆ ಅಭಿವೃದ್ಧಿಗೆ ಸಹಾಯಕವಾಗಿ ಇತರ ರಾಜ್ಯಗಳು /ಹೊರದೇಶಗಳಿಗೆ ಪ್ರವಾಸ ಕೈಗೊಂಡು ಅಧ್ಯಾಯನ ಮಾಡಲು ತಗಲುವ ಪ್ರವಾಸ ವೆಚ್ಚದಲ್ಲಿ ಸರ್ಕಾರದ ವತಿಯಿಂದ ಶೇ.90ರಷ್ಟು ರಿಯಾಯಿತಿ ಮಂಜೂರು ಮಾಡಲಾಗುವುದು.

- ಅಧ್ಯಯನ ಪ್ರವಾಸವು ಇತರೆ ರಾಜ್ಯಗಳಲ್ಲಿ ಕೈಗೊಂಡಿದ್ದಲ್ಲಿ, ಒಬ್ಬ ಅಭ್ಯರ್ಥಿಗೆ ಗರಿಷ್ಠ ರಿಯಾಯಿತಿ ರೂ.15,000/–ಗಳು ಅಥವಾ ನಿಖರವಾದ ಖರ್ಚು, ಇವುಗಳಲ್ಲಿ ಯಾವುದು ಕಡಿಮೆಯೋ, ಅದನ್ನು ಪರಿಗಣಿಸಲಾಗುವುದು.
- ಅಧ್ಯಯನ ಪ್ರವಾಸವು ಹೊರದೇಶಗಳಲ್ಲಿ ಕೈಗೊಂಡಿದ್ದಲ್ಲಿ ಒಬ್ಬ ಅಭ್ಯರ್ಥಿಗೆ ಗರಿಷ್ಠ ರಿಯಾಯಿತಿ ಶೇ.90 ರಷ್ಟು ಅಥವಾ ರೂ.1,00,000/–ಗಳು ಇವುಗಳಲ್ಲಿ ಯಾವುದು ಕಡಿಮೆಯೋ, ಅದನ್ನು ಪರಿಗಣಿಸಲಾಗುವುದು.

**7. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರು ಕೆಎಸ್.ಎಫ್ ಸಿ ಮತ್ತು ಇತರೇ ಹಣಕಾಸು ಸಂಸ್ಥೆಯವರು ವಿಧಿಸಿರುವ ಪರಿಷ್ಕರಣಾ ಶುಲ್ಕ, ಏಕಕಾಲಿಕ ಸಾಲ ವಿತರಣಾ ಶುಲ್ಕ ಮತ್ತು ಇತರೆ ಶುಲ್ಕಗಳ ಮರುಪಾವತಿ**

ದಿನಾಂಕ:01–04–2017 ರಿಂದ ಮೊದಲ ಬಾರಿಗೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರು ಸ್ಥಾಪಿಸುವ ಸಣ್ಣ ಮತ್ತು ಅತೀ ಸಣ್ಣ ಘಟಕಗಳೂ ಸಾಲ ಪಡೆಯುವ ಸಂದರ್ಭದಲ್ಲಿ ಕೆಎಸ್.ಎಫ್ ಸಿ ಮತ್ತು ಇತರೇ ಹಣಕಾಸು ಸಂಸ್ಥೆಯವರು

ವಿಧಿಸಿರುವ ಪರಿಷ್ಕರಣಾ ಶುಲ್ಕ, ಕಾನೂನು ಶುಲ್ಕ, ಏಕಕಾಲಿಕ ಸಾಲ ವಿತರಣಾ ಶುಲ್ಕ ಮತ್ತು ಇತರೆ ಶುಲ್ಕಗಳನ್ನು ಭರಿಸಲಾಗುವುದು.

**8. ವಿದ್ಯುಚ್ಛಕ್ತಿ ಸಹಾಯಧನ:**

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ಯಮಗಳು ದಿನಾಂಕ:01-04-2017 ರಿಂದ ಪ್ರಾರಂಭವಾಗಿರುವ ಹೊಸ ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕಾ ಘಟಕಗಳಿಗೆ ಮೊದಲ 5 ವರ್ಗಗಳ ಅವಧಿಗೆ ಪ್ರತಿ ಯುನಿಟ್‌ಗೆ 2 ರೂ.ಗಳಷ್ಟು ವಿದ್ಯುಚ್ಛಕ್ತಿ ಸಹಾಯಧನ ನೀಡಲಾಗುವುದು.

**9. ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ ವಸತಿ ಕಾರ್ಯಾಗಾರ ಯೋಜನೆ**

2017-18ನೇ ಸಾಲಿನಿಂದ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಸಹಯೋಗದೊಂದಿಗೆ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯ ವಸತಿ ಕಾರ್ಯಾಗಾರ ಯೋಜನೆಯನ್ನು ಅನುಷ್ಠಾನ ಮಾಡಲಾಗುತ್ತಿದೆ. ಈ ಯೋಜನೆಯಡಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಪ್ರತಿ ಘಟಕದ ವೆಚ್ಚ ಅನುಕ್ರಮವಾಗಿ ರೂ.3.00 ಲಕ್ಷ ಮತ್ತು ರೂ.3.25 ಲಕ್ಷಗಳನ್ನು ನಿಗದಿಪಡಿಸಲಾಗಿದೆ. ಇದರಲ್ಲಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಮೂಲಕ ಕ್ರಮವಾಗಿ ರೂ.1.75 ಲಕ್ಷ ಮತ್ತು ರೂ.2.00 ಲಕ್ಷ ಭರಿಸಲಾಗುವುದು. ರೂ.1.00 ಲಕ್ಷ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಸಹಾಯಧನ ಮತ್ತು ಫಲಾನುಭವಿಗಳು ರೂ.25,000/- ಭರಿಸಬೇಕಾಗಿರುತ್ತದೆ.


Generated from eOffice by NAGARAJ MTB, C&I-MIN(NMTB), MINISTER, C&I SEC on 11/03/2022 09.55 AM

## ಹೊಸ ಕೈಗಾರಿಕಾ ನೀತಿ 2020-25 ರಡಿಯಲ್ಲಿ ಎಂ.ಎಸ್.ಎಂ.ಇ ಗಳಿಗೆ ದೊರೆಯುವ ಪ್ರೋತ್ಸಾಹ ಮತ್ತು ರಿಯಾಯಿತಿಗಳು:

<table>
<tr><th>ಉತ್ತೇಜನದ ಮಾದರಿ</th><th>ಸಾಮಾನ್ಯ ಪ್ರವರ್ಗ</th><th>ವಿಶೇಷ ಪ್ರವರ್ಗ (ಪ.ಜಾತಿ/ಪ.ಪಂ, ಮಹಿಳೆಯರು,ಅಲ್ಪಸಂಖ್ಯಾತರು, ವಿಕಲಾಂಗರು ಹಾಗೂ ಮಾಜಿಉದ್ಯಮಶೀಲ ಸೈನಿಕರು.</th></tr>
<tr><td rowspan="2">ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ಹೂಡಿಕೆ ಉತ್ತೇಜನಾ ಸಹಾಯಧನ</td><td>ಸೂಕ್ಷ್ಮ ಕೈಗಾರಿಕೆಗಳು<br>ವಲಯ 1: ವಿಎಫ್ಎಯ 30% (ಗರಿಷ್ಟ ರೂ.25ಲಕ್ಷ)<br>ವಲಯ 2: ವಿಎಫ್ಎಯ 25% (ಗರಿಷ್ಟ ರೂ.20ಲಕ್ಷ)<br>ವಲಯ 3: ಇಲ್ಲ<br><br>ಸಣ್ಣ ಕೈಗಾರಿಕೆಗಳು<br>ವಲಯ 1: ವಿಎಫ್ಎಯ 25% (ಗರಿಷ್ಟ ರೂ.100ಲಕ್ಷ)<br>ವಲಯ 2: ವಿಎಫ್ಎಯ 20% (ಗರಿಷ್ಟ ರೂ.90ಲಕ್ಷ)<br>ವಲಯ 3: ಇಲ್ಲ<br><br>ವಿಎಫ್ಎ –ಸ್ಥಿರಾಸ್ತಿಯ ಮೌಲ್ಯ</td><td>ಸೂಕ್ಷ್ಮ ಕೈಗಾರಿಕೆಗಳು<br>ವಲಯ 1: ವಿಎಫ್ಎಯ 35% (ಗರಿಷ್ಟ ರೂ.30ಲಕ್ಷ)<br>ವಲಯ 2: ವಿಎಫ್ಎಯ 30% (ಗರಿಷ್ಟ ರೂ.25ಲಕ್ಷ)<br>ವಲಯ 3: ವಿಎಫ್ಎನ 10% (ಗರಿಷ್ಟ ರೂ.10ಲಕ್ಷ)<br><br>ಸಣ್ಣ ಕೈಗಾರಿಕೆಗಳು<br>ವಲಯ 1: ವಿಎಫ್ಎಯ 30% (ಗರಿಷ್ಟ ರೂ.105ಲಕ್ಷ)<br>ವಲಯ 2: ವಿಎಫ್ಎಯ 25% (ಗರಿಷ್ಟ ರೂ.95ಲಕ್ಷ)<br>ವಲಯ 3: ವಿಎಫ್ಎನ 10% (ಗರಿಷ್ಟ ರೂ.25ಲಕ್ಷ)<br><br>ವಲಯ 1 ಮತ್ತು 2 ರಲ್ಲಿ ವಿಎಫ್ಎಯ 5% ಹೆಚ್ಚುವರಿ ಸಬ್ಸಿಡಿ ಗರಿಷ್ಟ ರೂ.5 ಲಕ್ಷ</td></tr>
<tr><td colspan="2">ಸೂಚನೆ:<br>ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳು ಪ್ರತೀ ಆರ್ಥಿಕ ವರ್ಷದಲ್ಲಿ ವಹಿವಾಟಿನ ಶೇ.10 ರಷ್ಟು ಹೂಡಿಕೆ ಉತ್ತೇಜನ ಸಬ್ಸಿಡಿಯನ್ನು ಪಡೆಯಬಹುದು ಮತ್ತು ಈ ಸಹಾಯಧನವನ್ನು ವಾಣಿಜ್ಯ ಉತ್ಪಾದನೆ ಆರಂಭಿಸಿದ ದಿನಾಂಕದಿಂದ ಗರಿಷ್ಠ 5 ಆರ್ಥಿಕ ವರ್ಷಗಳವರೆಗೆ ವಿಸ್ತರಿಸಬಹುದು. ಇಂತಹ ಸಂಚಿತ ಹೂಡಿಕೆ ಉತ್ತೇಜನಾ ಸಬ್ಸಿಡಿಯು ಮೇಲ್ಕಾಣಿಸಿದ ಗರಿಷ್ಟ ಮಿತಿಗೆ ಒಳಪಟ್ಟಿರುತ್ತದೆ. ಈ ಹೂಡಿಕೆ ಉತ್ತೇಜನಾ ಸಬ್ಸಿಡಿಯ ಮಿತಿಯು ಅವಧಿ ಮುಗಿಯುವವರೆಗೆ (5ಆರ್ಥಿಕ ವರ್ಷಗಳವರೆಗೆ )ಅಥವಾ ಮಿತಿ ಮುಗಿಯುವವರೆಗೆ ಯಾವುದು ಮೊದಲೋ ಅಲ್ಲಿವರೆಗೆ ಅನ್ವಯವಾಗುತ್ತದೆ ಮತ್ತು ಇದನ್ನು ಮುಂದೂಡುವಂತಿಲ್ಲ.</td></tr>
<tr><td>ಮಧ್ಯಮ ಕೈಗಾರಿಕೆಗಳಿಗೆ ಹೂಡಿಕೆ ಉತ್ತೇಜನಾ ಸಬ್ಸಿಡಿ<br><br>ಮೊದಲ 10 ಕೋಟಿ ರೂಗಳಿಗೆ ಕನಿಷ್ಟ ಉದ್ಯೋಗಾವಕಾಶ ಸಂಖ್ಯೆ 20 ಮತ್ತು ಮುಂದಿನ ಹೆಚ್ಚುವರಿ ಪ್ರತೀ ರೂ.10 ಕೋಟಿಗೆ ಹೆಚ್ಚುವರಿ 7 ಉದ್ಯೋಗಾವಕಾಶ ಪ್ರಮಾಣಾನುಪಾತದಂತೆ</td><td colspan="2">ಮಧ್ಯಮ ಕೈಗಾರಿಕೆಗಳು
<table>
<tr><th>ವಲಯ</th><th>ಶೇಕಡಾವಾರು ವಹಿವಾಟು</th><th>ಗರಿಷ್ಠ ಅವಧಿ (ವರ್ಷ)</th><th>ವಿಎಫ್ಎ ಮಿತಿ</th></tr>
<tr><td>1</td><td rowspan="2">2.50%</td><td>6</td><td>ವಿಎಫ್ಎಯ 40 %</td></tr>
<tr><td>2</td><td>5</td><td>ವಿಎಫ್ಎಯ 35 %</td></tr>
<tr><td>3</td><td colspan="3">ಇಲ್ಲ</td></tr>
</table>
ಸೂಚನೆ:<br>ಮಧ್ಯಮ ಕೈಗಾರಿಕೆಗಳು ಹೂಡಿಕೆ ಉತ್ತೇಜನ ಸಬ್ಸಿಡಿಯನ್ನು ಪ್ರತೀ ಆರ್ಥಿಕ ವರ್ಷದಲ್ಲಿ ವಹಿವಾಟಿನ ಶೇಕಡಾವಾರು ಪಡೆಯಬಹುದಾಗಿದ್ದು ಮೇಲ್ಕಾಣಿಸಿದಂತೆ ವಾಣಿಜ್ಯ ಉತ್ಪಾದನೆ ಆರಂಭಿಸಿದ ಗರಿಷ್ಟ ಅವಧಿಗೆ ಅನ್ವಯವಾಗುವುದು. ಇಂತಹ ಸಂಚಿತ ಹೂಡಿಕೆ ಉತ್ತೇಜನಾ ಸಬ್ಸಿಡಿಯು ವಿಎಫ್ಎ ಮಿತಿ ಅಥವಾ ಅವಧಿ ಮುಗಿಯುವವರೆಗೆ ಯಾವುದು ಮೊದಲೋ ಅಲ್ಲಿವರೆಗೆ ಅನ್ವಯವಾಗುತ್ತದೆ ಮತ್ತು ಇದನ್ನು ಮುಂದೂಡುವಂತಿಲ್ಲ. ಕಡಿಮೆ ಉದ್ಯೋಗಾವಕಾಶ ಒದಗಿಸಲು ಬಯಸುವ ಮಧ್ಯಮ ಕೈಗಾರಿಕೆಗಳು/ಹೂಡಿಕೆಗೆ ತಕ್ಕಂತೆ ನಿಗದಿಪಡಿಸಿದ ಉದ್ಯೋಗಾವಕಾಶ ನೀಡಲು ಸಾಧ್ಯವಾಗದ ಕೈಗಾರಿಕೆಗಳಿಗೆ ಒಟ್ಟು ಒದಗಿಸಿದ ಉದ್ಯೋಗಾವಕಾಶಕ್ಕೆ ಅನುಗುಣವಾಗಿ ವಹಿವಾಟು ಶೇಕಡಾವಾರು ಪ್ರಮಾಣ ಕಡಿಮೆ ಆಗುವುದು. ಹೀಗಿದ್ದರೂ ಗರಿಷ್ಟ ಅವಧಿ ಮತ್ತು ವಿಎಫ್ಎ ಮೇಲ್ಕಂಡಂತೆ ಇರಲಿದೆ.</td></tr>
<tr><td rowspan="2">ಎಂಎಸ್ಎಂಇಗಳಿಗೆ ಸ್ಟಾಂಪ್ ಶುಲ್ಕ(ಡ್ಯೂಟಿ) ವಿನಾಯಿತಿ</td><td colspan="2">ಸ್ಟಾಂಪ್ ಶುಲ್ಕ ವಿನಾಯಿತಿ ಮತ್ತು ನೋಂದಣಿ ಶುಲ್ಕದಲ್ಲಿ ರಿಯಾಯಿತಿ:<br>ರಾಜ್ಯ ಹಣಕಾಸು ನಿಗಮ, ರಾಷ್ಟ್ರಮಟ್ಟದ ಹಣಕಾಸು ಸಂಸ್ಥೆಗಳು,ವಾಣಿಜ್ಯ ಬ್ಯಾಂಕ್‌ಗಳು ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳು, ಸಹಕಾರಿ ಬ್ಯಾಂಕ್‌ಗಳು, ಖಾದಿ ಮತ್ತು ಗ್ರಾಮೀಣ ಕೈಗಾರಿಕೆ ಮಂಡಳಿ, ಖಾದಿ ಮತ್ತು ಗ್ರಾಮೀಣ ಕೈಗಾರಿಕೆ ಆಯೋಗ(ಕಮಿಷನ್), ಕರ್ನಾಟಕ ರಾಜ್ಯ ಪ.ಜಾತಿ/ಪ.ವರ್ಗ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮ ಮತ್ತಿತರ ಸಂಸ್ಥೆಗಳಿಂದ ಸಾಲ ಪಡೆಯಲಿಕ್ಕಾಗಿ ಸಾಲ ಒಪ್ಪಂದ, ಸಾಲ ಕರಾರು ಪತ್ರ, ಅಡಮಾನ, ಅಡಮಾನಿಕೆ ದಸ್ತಾವೇಜುಗಳಿಗಾಗಿ ಸರ್ಕಾರ ಕಾಲಾನುಕ್ರಮವಾಗಿ ಹೊರಡಿಸುವ ಅಧಿಸೂಚನೆಗಳಿಗೆ ಅನುಗುಣವಾಗಿ ನೀಡಬೇಕಾದ ಸ್ಟಾಂಪ್ ಶುಲ್ಕದಿಂದ ಆರಂಭದ 5 ವರ್ಷಗಳ ಕಾಲ ಮಾತ್ರ ವಿನಾಯಿತಿ ನೀಡಲಾಗುವುದು.<br><br>ಕೈಗಾರಿಕೋದ್ಯಮಿಗಳು, ಕೈಗಾರಿಕಾ ನಿವೇಶನ, ಷೆಡ್‌ಗಳು, ಕೈಗಾರಿಕಾ ಟೆನ್‌ಮೆಂಟ್ಸ್ ಮತ್ತು ಬಹುಮಹಡಿ ಸಂಕೀರ್ಣದ ಕಾರ್ಖಾನೆಗಳನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಕರ್ನಾಟಕ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ, ಕಿಯಾನಿಕ್ಸ್, ಕೈಗಾರಿಕಾ ಸಹಕಾರ ಸಂಘಗಳು, ಅನುಮೋದಿತ ಖಾಸಗಿ ಕೈಗಾರಿಕಾ ವಸಾಹತುಗಳು/ಪಾರ್ಕ್‌ಗಳು, ಆಹಾರ ಪಾರ್ಕ್‌ಗಳು, ಕರ್ನಾಟಕ/ಭಾರತ ಸರ್ಕಾರದಿಂದ ರಚಿಸಲಾದ ವಿಶೇಷ ಉದ್ದೇಶ ವಾಹನ(ಎಸ್/ಪಿ.ವಿ)ಗಳಿಂದ ಹಂಚಿಕೆ ಪಡೆಯುವಲ್ಲಿ ಕೈಗಾರಿಕಾ ಉದ್ದಿಮೆಗಳು ಮಾಡಿಕೊಂಡ ಭೋಗ್ಯ ಪತ್ರ (ಲೀಸ್ ಡೀಡ್ಸ್), ಭೋಗ್ಯ ಮತ್ತು ಕ್ರಯ ಪತ್ರ, ಉಪ-ಭೋಗ್ಯ(ಸಬ್ ಲೀಸ್) ಹಾಗೂ ಪರಿಪೂರ್ಣ ಕ್ರಯ ಪತ್ರಗಳಿಗೂ ಈ ಕೆಳಗಿನಂತೆ ವಿನಾಯಿತಿ ನೀಡಬೇಕು.</td></tr>
<tr><td>ವಲಯ 1 : 100%<br>ವಲಯ 2 : 100%<br>ವಲಯ 3 : ಇಲ್ಲ</td><td>ವಲಯ 1 : 100%<br>ವಲಯ 2 : 100%<br>ವಲಯ 3 : 75%</td></tr>
<tr><td>ಎಂಎಸ್ಎಂಇಗಳಿಗೆ ನೋಂದಣಿ ಶುಲ್ಕದಲ್ಲಿ ರಿಯಾಯಿತಿ</td><td>ವಲಯ1, ವಲಯ 2 : ರೂ.1000/-ಕ್ಕೆ ರೂ.1/-<br>ವಲಯ 3 : ಇಲ್ಲ</td><td>ಎಲ್ಲಾ ವಲಯಗಳಿಗೆ :ರೂ.1000/-ಕ್ಕೆ ರೂ.1/-</td></tr>
<tr><td></td><td colspan="2">ಸೂಚನೆ:<br>1. ಸ್ಟಾಂಪ್ ಶುಲ್ಕ ವಿನಾಯಿತಿ ಮತ್ತು ನೋಂದಣಿ ಶುಲ್ಕ ರಿಯಾಯಿತಿಗಳು ಕೆಎಲ್ಆರ್ ಕಾಯ್ದೆ 1961ರ ಸೆಕ್ಷನ್ 109ರ ಅಡಿಯಲ್ಲಿ ಖರೀದಿಸಿದ</td></tr>
</table>



Generated from eOffice by NAGARAJ MTB, C&I-MIN(NMTB), MINISTER, C&I SEC on 11/03/2022 09:55 AM

| ಉತ್ತೇಜನದ ಮಾದರಿ | ಸಾಮಾನ್ಯ ಪ್ರವರ್ಗ | ವಿಶೇಷ ಪ್ರವರ್ಗ (ಪ.ಜಾತಿ/ಪ.ಪಂ, ಮಹಿಳೆಯರು,ಅಲ್ಪಸಂಖ್ಯಾತರು, ವಿಕಲಾಂಗರು ಹಾಗೂ ಮಾಜಿಉದ್ಯಮಶೀಲ ಸೈನಿಕರು. |
|---|---|---|
| | ಭೂಮಿ, ಹಾಗೂ ಎಸ್‌ಎಲ್‌ಡಬ್ಲ್ಯುಸಿಸಿ/ಡಿಎಲ್‌ಡಬ್ಲ್ಯುಸಿಸಿ ಅನುಮೋದಿತ ಯೋಜನೆಗಳ ಕೈಗಾರಿಕಾ ಭೂಪರಿವರ್ತಿತ ಭೂಮಿಯ ನೇರ ಖರೀದಿಗೂ ಅನ್ವಯವಾಗುವುದು. ಸ್ವಾಧೀನಪಡಿಸಿಕೊಂಡ ಭೂಮಿಗೆ ಪರಿಹಾರವಾಗಿ ಕೆಐಎಡಿಬಿ ಭೂ ಮಾಲೀಕರಿಗೆ ನೀಡುವ ಭೂಮಿಗೂ ಈ ರಿಯಾಯಿತಿ/ವಿನಾಯಿತಿ ನೀಡಲಾಗುವುದು.<br>2. ಭೂಮಿ,ಕೈಗಾರಿಕಾ ನಿವೇಶನ, ಷೆಡ್‌ಗಳು, ಕೈಗಾರಿಕಾ ಟೆನ್‌ಮೆಂಟ್ಸ್‌ಗಳಿಗೆಭೋಗ್ಯದ ಅವಧಿ ಮುಗಿದ ಬಳಿಕ ಅಂತಿಮ ಕ್ರಯ ಪತ್ರ (ಸೇಲ್ ಡೀಡ್)ದ ನೋಂದಣಿಗೂ ಕೈಗಾರಿಕಾ ನೀತಿಯಲ್ಲಿ ನಮೂದಿಸಿರುವಂತೆ ಭೋಗ್ಯ ಮತ್ತು ಕ್ರಯಪತ್ರ (ಲೀಸ್ ಕಮ್ ಸೇಲ್ ಡೀಡ್) ಮಾಡುವ ವೇಳೆ ಚಾಲ್ತಿಯಲ್ಲಿದ್ದ ಪ್ರಕಾರ ಸ್ಟಾಂಪ್ ಶುಲ್ಕ ವಿನಾಯ್ತಿ ಮತ್ತು ನೋಂದಣಿ ಶುಲ್ಕಗಳಲ್ಲಿ ರಿಯಾಯ್ತಿ ಲಭ್ಯವಾಗುವುದು. | |
| ಎಂಎಸ್‌ಎಂಇಗಳಿಗೆ ಭೂ ಪರಿವರ್ತನಾ ಶುಲ್ಕ ಮರುಪಾವತಿ | ವಲಯ 1 : 100%<br>ವಲಯ 2 : 100%<br>ವಲಯ 3 : ಇಲ್ಲ | ವಲಯ 1 : 100%<br>ವಲಯ 2 : 100%<br>ವಲಯ 3 : 75% |
| ಎಂಎಸ್‌ಎಂಇಗಳಿಗೆ ವಿದ್ಯುತ್‌ಶುಲ್ಕದ ಮೇಲಿನ ತೆರಿಗೆ ವಿನಾಯಿತಿ | ವಲಯ 1 : 100% 7 ವರ್ಷದವರೆಗೆ<br>ವಲಯ 2 : 100% 6 ವರ್ಷದವರೆಗೆ<br>ವಲಯ 3 : ಇಲ್ಲ | ವಲಯ1 : 100% 8 ವರ್ಷದವರೆಗೆ<br>ವಲಯ 2 : 100% 7 ವರ್ಷದವರೆಗೆ<br>ವಲಯ 3 : 100% 4 ವರ್ಷದವರೆಗೆ |
| ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ವಿದ್ಯುತ್‌ಚ್ಛಕ್ತಿ ಸಬ್ಸಿಡಿ | **ವಲಯ 1 ಮತ್ತು 2ಕ್ಕೆ ಮಾತ್ರ:** ಬಳಸಿದ ಪ್ರತಿ ವಿದ್ಯುತ್ ಯುನಿಟ್ ಒಂದಕ್ಕೆ ಪಾವತಿಸಿದ ವಿದ್ಯುತ್ ಶುಲ್ಕಕ್ಕೆ ರೂ.1/-ರಂತೆ 3 ವರ್ಷಗಳ ಅವಧಿವರೆಗೆ ವಿದ್ಯುತ್‌ಚ್ಛಕ್ತಿ ಸಬ್ಸಿಡಿ. | |
| ಕುಶಲಕರ್ಮಿಗಳಿಗೆ ಬೆಂಬಲ | 1. ಕುಶಲಕರ್ಮಿಗಳಿಗೆ ಶೇ. 4% ಬಡ್ಡಿದರದಲ್ಲಿ ಅವಧಿ ಸಾಲ(ಟರ್ಮ್ ಲೋನ್) ಮತ್ತು ದುಡಿಮ ಬಂಡವಾಳ ಸಾಲ.<br>2. ಕುಶಲಕರ್ಮಿಗಳ ಕರಕುಶಲ ವಸ್ತುಗಳ ವಹಿವಾಟಿನ ಮೇಲೆ ಶೇ. 10%ರಷ್ಟು ಮಾರುಕಟ್ಟೆ ಅಭಿವೃದ್ಧಿ ನೆರವು (ಎಂಡಿಎ)<br>3. ಕರಕುಶಲ ಸಂಘಟನೆಗಳಿಗೆ, ಕರಕುಶಲ ಕಾಂಪ್ಲೆಕ್ಸ್‌ಗಳಿಗೆ,ಸಮೂಹ ಮೊದಲಾದವುಗಳಿಗೆ ಯಂತ್ರೋಪಕರಣಗಳು,ಬಿಡಿ ಭಾಗಗಳಿಗೆ 75% ಅನುದಾನ | |

**ಎಂಎಸ್‌ಎಂಇಗಳಿಗೆ ತಂತ್ರಜ್ಞಾನ ಅಳವಡಿಕೆ ಮತ್ತು ನವೋನ್ವೇಷಣೆ**

| | ಸಾಮಾನ್ಯ ಪ್ರವರ್ಗ | ವಿಶೇಷ ಪ್ರವರ್ಗ (ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಮಹಿಳೆಯರು, ಅಲ್ಪಸಂಖ್ಯಾತರು, ವಿಕಲಾಂಗರು ಹಾಗೂ ಮಾಜ ಸೈನಿಕ ಉದ್ಯಮಿಗಳು) |
|---|---|---|
| ತಂತ್ರಜ್ಞಾನ ಮೇಲ್ದರ್ಜೆಗೇರಿಸುವ ಸಾಲದ ಮೇಲೆ ಬಡ್ಡಿ ಸಹಾಯಧನ | ವಲಯ1 : 5% 6 ವರ್ಷದವರೆಗೆ *<br>ವಲಯ 2 : 5% 5 ವರ್ಷದವರೆಗೆ *<br>ವಲಯ 3 : 5% 5 ವರ್ಷದವರೆಗೆ *<br><br>* ಭಾರತ ಸರ್ಕಾರದ ಸಿಎಲ್‌ಸಿಎಸ್‌ಎಸ್(ಕ್ರೆಡಿಟ್ ಲಿಂಕ್ಡ್ ಕ್ಯಾಪಿಟಲ್ ಸಬ್ಸಿಡಿ ಸ್ಕೀಂ-ಸಾಲ ಸಂಯೋಜಿತ ಬಂಡವಾಳ ಸಹಾಯಧನ ಯೋಜನೆ) ಅಡಿಯಲ್ಲಿ ಒಳಗೊಂಡಿರದ ಕೆಎಸ್‌ಎಫ್‌ಸಿ ಮತ್ತು ಅನುಸೂಚಿತ (ಷೆಡ್ಯೂಲ್ಡ್) ವಾಣಿಜ್ಯ ಬ್ಯಾಂಕ್‌ಗಳಿಂದ ಪಡೆದ ಸಾಲಗಳಿಗೆ | ವಲಯ 1 : 5% 6 ವರ್ಷದವರೆಗೆ *<br>ವಲಯ 2 : 5% 5 ವರ್ಷದವರೆಗೆ *<br>ವಲಯ 3 : 5% 5 ವರ್ಷದವರೆಗೆ *<br><br>* ಭಾರತ ಸರ್ಕಾರದ ಸಿಎಲ್‌ಸಿಎಸ್‌ಎಸ್(ಕ್ರೆಡಿಟ್ ಲಿಂಕ್ಡ್ ಕ್ಯಾಪಿಟಲ್ ಸಬ್ಸಿಡಿ ಸ್ಕೀಂ-ಸಾಲ ಸಂಯೋಜಿತ ಬಂಡವಾಳ ಸಹಾಯಧನ ಯೋಜನೆ) ಅಡಿಯಲ್ಲಿ ಒಳಗೊಂಡಿರದ ಕೆಎಸ್‌ಎಫ್‌ಸಿ ಮತ್ತು ಅನುಸೂಚಿತ (ಷೆಡ್ಯೂಲ್ಡ್) ವಾಣಿಜ್ಯ ಬ್ಯಾಂಕ್‌ಗಳಿಂದ ಪಡೆದ ಸಾಲಗಳಿಗೆ |
| ತಂತ್ರಜ್ಞಾನ ಅಳವಡಿಕೆಗೆ | ಎಲ್ಲಾ ವಲಯಗಳಿಗೆ<br>ವೆಚ್ಚದ 25% (ಗರಿಷ್ಟ ರೂ.50,000/-) ಅನುಬಂಧ 8ರಲ್ಲಿ ಉಲ್ಲೇಖಿಸಲಾದ ಭಾರತ ಸರ್ಕಾರದ ಮಾನ್ಯತೆ ಪಡೆದ ಪ್ರಯೋಗಾಲಯಗಳಿಂದ ತಂತ್ರಜ್ಞಾನ ಅಳವಡಿಸಿದ್ದಕ್ಕಾಗಿ | ಎಲ್ಲಾ ವಲಯಗಳಿಗೆ<br>ವೆಚ್ಚದ 50% (ಗರಿಷ್ಟ ರೂ.1 ಲಕ್ಷ )ಅನುಬಂಧ 8ರಲ್ಲಿ ಉಲ್ಲೇಖಿಸಲಾದ ಭಾರತ ಸರ್ಕಾರದ ಮಾನ್ಯತೆ ಪಡೆದ ಪ್ರಯೋಗಾಲಯಗಳಿಂದ ತಂತ್ರಜ್ಞಾನ ಅಳವಡಿಸಿದ್ದಕ್ಕಾಗಿ . |
| ತಂತ್ರಜ್ಞಾನ ವ್ಯವಹಾರ ವಿಕಸನ ಕೇಂದ್ರ (ಟಿಬಿಐಸಿ) | ಎಲ್ಲಾ ವಲಯಗಳಿಗೆ<br>ವಿಕಸನ ಕೇಂದ್ರ (ಇನ್‌ಕ್ಯುಬೇಷನ್ ಕೇಂದ್ರ)ದ ವೆಚ್ಚದ 25% (ಗರಿಷ್ಟ ರೂ.50.00 ಲಕ್ಷ) (ವಲಯ 1 ರಲ್ಲಿ ಕನಿಷ್ಟ 1 ಟಿಬಿಐಸಿ) | ಎಲ್ಲಾ ವಲಯಗಳಿಗೆ<br>ವಿಕಸನ ಕೇಂದ್ರ (ಇನ್‌ಕ್ಯುಬೇಷನ್ ಕೇಂದ್ರ)ದ ವೆಚ್ಚದ 25% (ಗರಿಷ್ಟರೂ.60.00 ಲಕ್ಷ)(ವಲಯ 1 ರಲ್ಲಿ ಕನಿಷ್ಟ 1 ಟಿಬಿಐಸಿ ) |
| ಗುಣಮಟ್ಟ ಪ್ರಮಾಣೀಕರಣಕ್ಕೆ ಉತ್ತೇಜನ | ಎಲ್ಲಾ ವಲಯಗಳಿಗೆ<br>ಐಎಸ್‌ಒ ಸರಣಿ ಪ್ರಮಾಣೀಕರಣ ವೆಚ್ಚದ 75%<br>(ಗರಿಷ್ಟ ರೂ.75,000)<br>ಬಿಐಎಸ್ ಪ್ರಮಾಣೀಕರಣ: ಬಿಐಎಸ್(ಬ್ಯೂರೋ ಆಫ್ ಇಂಡಿಯನ್ ಸ್ಟಾಂಡರ್ಡ್)ಗೆ ಪಾವತಿ ಮಾಡಬೇಕಾದ ಶುಲ್ಕದ 50% (ಗರಿಷ್ಟ ರೂ.20,000/-) & 25% ವೆಚ್ಚ (ಗರಿಷ್ಟ ರೂ.50,000/-)ಬಿಐಎಸ್ ಅನುಮೋದಿಸಿದಂತೆ ಪರೀಕ್ಷಾ ಉಪಕರಣ ಖರೀದಿಗೆ | ಎಲ್ಲಾ ವಲಯಗಳಿಗೆ<br>ಐಎಸ್‌ಒ ಸರಣಿ ಪ್ರಮಾಣೀಕರಣ ವೆಚ್ಚದ 75%<br>(ಗರಿಷ್ಟ ರೂ.1,00,000)<br>ಬಿಐಎಸ್ ಪ್ರಮಾಣೀಕರಣ: ಬಿಐಎಸ್(ಬ್ಯೂರೋ ಆಫ್ ಇಂಡಿಯನ್ ಸ್ಟಾಂಡರ್ಡ್)ಗೆ ಪಾವತಿ ಮಾಡಬೇಕಾದ ಶುಲ್ಕದ 50% (ಗರಿಷ್ಟ ರೂ.25,000/-) & 25% ವೆಚ್ಚ (ಗರಿಷ್ಟ ರೂ.1,00,0000/---)ಬಿಐಎಸ್ ಅನುಮೋದಿಸಿದಂತೆ ಪರೀಕ್ಷಾ ಉಪಕರಣ ಖರೀದಿಗೆ |
| | **ಮಹಿಳಾ ಮಾಲಿಕತ್ವದ ವಾಣಿಜ್ಯ ಉದ್ಯಮ(ಡಬ್ಲ್ಯುಬಿಇ) ವೀಕನೆಕ್ಟ್ ಪ್ರಮಾಣೀಕರಣ, ಎಲ್ಲಾ ವಲಯಗಳಿಗೆ**<br>3 ವರ್ಷಗಳ ಅವಧಿವರೆಗೆ ಗರಿಷ್ಟ ರೂ.75,000/-<br>ಪ್ರಮಾಣಪತ್ರ ಶುಲ್ಕದ 100% ಮೊದಲ ವರ್ಷಕ್ಕೆ -ಗರಿಷ್ಟ ರೂ.30,000/-<br>ಪ್ರಮಾಣಪತ್ರ ಶುಲ್ಕದ 90% ಎರಡನೇ ವರ್ಷಕ್ಕೆ-ಗರಿಷ್ಟ ರೂ.27,000/-<br>ಪ್ರಮಾಣಪತ್ರ ಶುಲ್ಕದ 80% ಮೂರನೇ ವರ್ಷಕ್ಕೆ ಗರಿಷ್ಟ ರೂ 18,000/- | |



Generated from eOffice by NAGARAJ MTB, C&I-MIN(NMTB), MINISTER, C&I SEC on 11/03/2022 09:55 AM

| ಎಂಎಸ್‌ಎಂಇಗಳ ಸುಸ್ಥಿರತೆ ಮತ್ತು ಜವಾಬ್ದಾರಿಯುತ ಕೈಗಾರಿಕೀಕರಣ | | |
|---|---|---|
| ಯಾವ ರೀತಿಯ ಬೆಂಬಲ | ಸಾಮಾನ್ಯ ಪ್ರವರ್ಗ | ವಿಶೇಷ ಪ್ರವರ್ಗ : (ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ, ಮಹಿಳೆಯರು, ಅಲ್ಪಸಂಖ್ಯಾತರು, ವಿಕಲಾಂಗರು ಹಾಗೂ ಮಾಜಿ ಸೈನಿಕ ಉದ್ಯಮಿಗಳು) |
| ಮಳೆ ನೀರು ಕೊಯ್ಲು | ಎಲ್ಲಾ ವಲಯಗಳಿಗೆ<br>ಉಪಕರಣದ ಬೆಲೆಯ 50% (ಗರಿಷ್ಠ ರೂ.2 ಲಕ್ಷ ) | ಎಲ್ಲಾ ವಲಯಗಳಿಗೆ<br>ಉಪಕರಣದ ಬೆಲೆಯ 75% (ಗರಿಷ್ಠ ರೂ.2.50 ಲಕ್ಷ ) |
| ತ್ಯಾಜ್ಯ ನೀರು ಸಂಸ್ಕರಣೆ | ಎಲ್ಲಾ ವಲಯಗಳಿಗೆ<br>ಉಪಕರಣದ ಬೆಲೆಯ 50% (ಗರಿಷ್ಠ ರೂ.7.50 ಲಕ್ಷ) | ಎಲ್ಲಾ ವಲಯಗಳಿಗೆ<br>ಉಪಕರಣದ ಬೆಲೆಯ 75% (ಗರಿಷ್ಠ ರೂ.8.50 ಲಕ್ಷ ) |
| ನೀರಿನ ಲೆಕ್ಕ ಪರಿಶೋಧನೆ(ಆಡಿಟ್)ಗೆ ತಗುಲಿದ ವೆಚ್ಚ ಮರುಪಾವತಿ | ಎಲ್ಲಾ ವಲಯಗಳಿಗೆ<br>75% ಗರಿಷ್ಠ ರೂ.1ಲಕ್ಷ ಪ್ರತೀ ನೀರಿನ ಆಡಿಟ್‌ಗೆ (ಒಂದು ಬಾರಿಗೆ) | ಎಲ್ಲಾ ವಲಯಗಳಿಗೆ<br>75% ಗರಿಷ್ಠ ರೂ.1ಲಕ್ಷ ಪ್ರತೀ ನೀರಿನ ಆಡಿಟ್‌ಗೆ (ಒಂದು ಬಾರಿಗೆ) |
| ಶೂನ್ಯ ತ್ಯಾಜ್ಯ/ ಹೊರಸೂಸುವಿಕೆ | ಎಲ್ಲಾ ವಲಯಗಳಿಗೆ<br>ಉಪಕರಣದ ಬೆಲೆಯ 50% (ಗರಿಷ್ಠ ರೂ.7.50ಲಕ್ಷ) | ಎಲ್ಲಾ ವಲಯಗಳಿಗೆ<br>ಉಪಕರಣದ ಬೆಲೆಯ 75% (ಗರಿಷ್ಠ ರೂ.8.50ಲಕ್ಷ) |
| ಇಲೆಕ್ಟ್ರಾನಿಕ್ ತ್ಯಾಜ್ಯ ಮತ್ತು ಪ್ಲಾಸ್ಟಿಕ್ ತ್ಯಾಜ್ಯಗಳ ಮರುಬಳಕೆ | ಎಲ್ಲಾ ವಲಯಗಳಿಗೆ<br>ವಿಎಫ್‌ಎನ ಶೇ.5ರಷ್ಟು (ಗರಿಷ್ಠ ರೂ.10ಲಕ್ಷ) | ಎಲ್ಲಾ ವಲಯಗಳಿಗೆ<br>ವಿಎಫ್‌ಎನ ಶೇ.5ರಷ್ಟು (ಗರಿಷ್ಠ ರೂ.12ಲಕ್ಷ) |
| ತ್ಯಾಜ್ಯ ಸಂಸ್ಕರಣಾ ಘಟಕ(ಇಟಿಪಿ) ಸ್ಥಾಪನೆಗೆ ಸಹಾಯಧನ | ಎಲ್ಲಾ ವಲಯಗಳಿಗೆ<br>ಇಟಿಪಿಯ ವೆಚ್ಚದ ಶೇ.50 ರಷ್ಟು (ಗರಿಷ್ಠ ರೂ.50 ಲಕ್ಷ) | ಎಲ್ಲಾ ವಲಯಗಳಿಗೆ<br>ಇಟಿಪಿಯ ವೆಚ್ಚದ ಶೇ.75 ರಷ್ಟು (ಗರಿಷ್ಠ ರೂ.60 ಲಕ್ಷ) |

| ಎಂಎಸ್‌ಎಂಇಗಳಿಗೆ ಪ್ರೋತ್ಸಾಹಗಳು ಮತ್ತು ವಿನಾಯಿತಿಗಳ ಪ್ಯಾಕೇಜ್‌ಗಳಿಗೆ ಹೆಚ್ಚುವರಿಯಾಗಿ ಖಾಸಗಿ ಕೈಗಾರಿಕಾ ಪಾರ್ಕ್‌ಗಳಲ್ಲಿ ಸ್ಥಾಪಿತವಾಗುವ ಸೂಕ್ಷ್ಮ ಮತ್ತು ಸಣ್ಣ ಘಟಕಗಳಿಗೆ ಪ್ರೋತ್ಸಾಹ | |
|---|---|
| ಭೂಮಿ ಸಬ್ಸಿಡಿ | ವಲಯ 1 ಮತ್ತು 2ಕ್ಕೆ ಮಾತ್ರ ಅನ್ವಯಿಸಿ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ಖಾಸಗಿ ಕೈಗಾರಿಕಾ ಪ್ರದೇಶಗಳು/ ಪಾರ್ಕ್‌ಗಳು/ ವಸಾಹತುಗಳು/ ಬಹುಮಹಡಿ ಸಂಕೀರ್ಣಗಳ ಕಾರ್ಖಾನೆಗಳಿಗೆ ಆಸ್ತಿ ಮಾರ್ಗಸೂಚಿ ದರದ (ಗೈಡೆನ್ಸ್ ವ್ಯಾಲ್ಯೂ) 25% ಗರಿಷ್ಠ 1 ಎಕರೆಗೆ ಅನ್ವಯಿಸಿ ವಿಶೇಷ ಭೂ ಸಬ್ಸಿಡಿ. ಇಂತಹ ಪ್ರಕರಣಗಳಲ್ಲಿ ಸ್ಥಿರಾಸ್ತಿ ಮೌಲ್ಯ(ವಿಎಫ್‌ಎ) ಅಡಿಯಲ್ಲಿ ಭೂಮಿಯ ಮೌಲ್ಯವನ್ನು ಇನ್ನಾವುದೇ ಪ್ರೋತ್ಸಾಹಧನವನ್ನು ವಿಎಫ್‌ಗೆ ಹೊಂದಿಕೊಂಡಂತೆ ಮಂಜೂರು ಮಾಡಲು ಪರಿಗಣಿಸಬಾರದು |
| ನೀರಿನ ದರ | ಖಾಸಗಿಕೈಗಾರಿಕಾ ಪ್ರದೇಶಗಳ/ ಪಾರ್ಕ್‌ಗಳು/ ವಸಾಹತುಗಳಲ್ಲಿ,ಬಹುಮಹಡಿ ಸಂಕೀರ್ಣಗಳ ಕಾರ್ಖಾನೆಗಳಲ್ಲಿ ಸ್ಥಾಪಿಸಲಾಗಿರುವ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳು ಬಳಕೆ ಮಾಡುವ ತೃತೀಯ ಹಂತದಲ್ಲಿ ಸಂಸ್ಕರಿಸಿದ ನೀರಿಗೆ ವೈಯಕ್ತಿಕವಾಗಿ ಕಾರ್ಯಾಚರಣೆ ನಡೆಸುವ ಕೈಗಾರಿಕೆಗಳಿಗೆ ಮೊದಲ 5 ವರ್ಷಗಳ ಕಾಲ ಒಂದು ಯೂನಿಟ್ ನೀರಿಗೆ (ಕೆಎಲ್‌ಡಿ) ರೂ.15/-ರಂತೆ ಸಬ್ಸಿಡಿ ನೀಡಲಾಗುವುದು. ಖಾಸಗಿ ಕೈಗಾರಿಕಾ ಪ್ರದೇಶ/ಪಾರ್ಕ್‌ಗಳು/ವಸಾಹತುಗಳು/ಬಹು ಮಹಡಿ ಸಂಕೀರ್ಣಗಳ ಕೈಗಾರಿಕೆಗಳು ಹಾಗೂ ಡೆವಲಪರ್ ಇಂತಹ ಕೈಗಾರಿಕೆಗಳಿಗೆ ಸರಬರಾಜು ಮಾಡಿದಲ್ಲಿ ಅನ್ವಯವಾಗುವುದು. |
| ಸಿಇಟಿಪಿ ದರ | ಸಾಮಾನ್ಯ ತ್ಯಾಜ್ಯ ಸಂಸ್ಕರಣಾ ಘಟಕಗಳ ನಿರಂತರ ಬಳಕೆಗೆ ಯುನಿಟ್‌ಗೆ ರೂ.15/- ಹೊರಸೂಸುವ ತ್ಯಾಜ್ಯದ ಮರುಸಂಸ್ಕರಣೆಗೆ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ಕೈಗಾರಿಕೆಗಳು ಆರಂಭಗೊಂಡ ಮೊದಲ 5ವರ್ಷಗಳವರೆಗೆ ಸಬ್ಸಿಡಿ ನೀಡಲಾಗುವುದು. |

| ರಫ್ತು ಕೈಗಾರಿಕೆಗಳು | |
|---|---|
| ಯಾವ ರೀತಿಯ ಬೆಂಬಲ | ಎಲ್ಲಾ ಪ್ರವರ್ಗಗಳಿಗೆ |
| ವಿದ್ಯುತ್ ತೆರಿಗೆ ವಿನಾಯಿತಿ | ಹೊಸ ಎಂಎಸ್‌ಎಂಇ ರಫ್ತು ಉದ್ದಿಮೆಗೆ ವಲಯ 3 ರಲ್ಲಿ ಮೊದಲ 5 ವರ್ಷಗಳವರೆಗೆ 100% ವಿದ್ಯುತ್ ತೆರಿಗೆ ವಿನಾಯಿತಿ (ಒಟ್ಟು ವಹಿವಾಟಿನ ಶೇ.50ರಷ್ಟು ರಫ್ತು ಇರಬೇಕು). |
| ಕಾರ್ಯನಿರ್ವಹಣಾ ಸಬ್ಸಿಡಿ | ತಮ್ಮ ರಫ್ತನ್ನು ಮುಂದಿನ ವರ್ಷಗಳಲ್ಲಿ ದ್ವಿಗುಣಗೊಳಿಸುವ ಎಂಎಸ್‌ಎಂಇ ಕೈಗಾರಿಕೆಗಳಿಗೆ ಎಲ್ಲಾ ವಲಯಗಳಲ್ಲಿ ಎಫ್‌ಒಬಿಯ 1% ಮೌಲ್ಯವನ್ನು ಪಾವತಿಸಲಾಗುವುದು. ಗರಿಷ್ಠ ಮಿತಿ ರೂ.10. ಲಕ್ಷ/ಘಟಕವೊಂದಕ್ಕೆ |
| ಬ್ಯಾಂಕ್ ಶುಲ್ಕ | ಎಲ್ಲಾ ವಲಯಗಳಲ್ಲಿ ಎಂಎಸ್‌ಎಂಇ ಕ್ಷೇತ್ರದ ಎಲ್ಲಾ ರಫ್ತಿನ ಇಬಿಆರ್‌ಸಿ ಪ್ರಸ್ತುತಪಡಿಸಿದಲ್ಲಿ ಬ್ಯಾಂಕ್ ಶುಲ್ಕಗಳ ಮರುಪಾವತಿ. ಗರಿಷ್ಠ ಘಟಕವೊಂದಕ್ಕೆ ರೂ.1ಲಕ್ಷ |
| ಇಸಿಜಿಸಿ ಶುಲ್ಕ | ಎಲ್ಲಾ ವಲಯಗಳಲ್ಲಿ ಎಂಎಸ್‌ಎಂಇಗಳಿಗೆ ಇಸಿಜಿಸಿ (ರಫ್ತು ಸಾಲ ಖಾತರಿ ನಿಗಮ) ಶುಲ್ಕದ ಮರುಪಾವತಿ 100% ವರೆಗೂ; ಗರಿಷ್ಠ ರೂ.1.00 ಲಕ್ಷ/ಘಟಕ/ವರ್ಷ |
| ಪ್ರಮಾಣೀಕರಣ ಶುಲ್ಕ | ಎಲ್ಲಾ ವಲಯಗಳಲ್ಲಿ ಶಾಸನಬದ್ಧ ಪ್ರಮಾಣ ಪತ್ರಗಳಾದ ಸಿಇ (ಚಾರ್ಟರ್ಡ್ ಎಂಜಿನಿಯರ್ ಸರ್ಟಿಫಿಕೇಟ್),ಚೀನಾ ಕಂಪಲ್ಸರಿ ಸರ್ಟಿಫಿಕೇಟ್((ಸಿಸಿಸಿ). ಜಿಎಂಪಿ(ಉತ್ತಮ ಉತ್ಪಾದನಾ ಅಭ್ಯಾಸ). ಫೈಟೋ ಸ್ಯಾನಿಟರಿ ಪ್ರಮಾಣಪತ್ರ. ಐಎಫ್‌ಎಸ್-ಬಿಆರ್‌ಸಿ-ಎಫ್‌ಎಸ್‌ಎಸ್ಸಿ22000 ಪ್ರಮಾಣಪತ್ರಗಳ ಮೇಲಿನ ವೆಚ್ಚದ 50% ಗರಿಷ್ಠ 1.00 ಲಕ್ಷ/ಒಂದು ಘಟಕಕ್ಕೆ ಮರುಪಾವತಿ. |
| ಪ್ರಮಾಣ ಪತ್ರ ಪಡೆಯಲು ಶುಲ್ಕ | ಎಲ್ಲ ವಲಯಗಳಲ್ಲಿ ನವದೆಹಲಿ ಅಥವಾ ಇನ್ನಾವುದೇ ಮಾನ್ಯತೆ ಪಡೆದ ಸಂಸ್ಥೆ ನಡೆಸುವ ಆಮದು-ರಫ್ತು ನಿರ್ವಹಣೆ ಕೋರ್ಸ್‌ಗೆ ಪಾವತಿಸಿದ ಶುಲ್ಕ ಮರುಪಾವತಿ ಕನಿಷ್ಠ 4 ತಿಂಗಳ ಅವಧಿ ಕೋರ್ಸ್‌ಗೆ 50% ಶುಲ್ಕ, ಗರಿಷ್ಠ ರೂ.25,000/ಅಭ್ಯರ್ಥಿ/ಕೋರ್ಸ್‌ಗೆ.<br>ಉತ್ತೇಜನವು ನೀತಿ ಅವಧಿಯಲ್ಲಿ ಒಂದು ಕೋರ್ಸ್‌ಗೆ ಒಂದು ಬಾರಿಗೆ ಲಭ್ಯವಿದ್ದು ಒಂದು ಘಟಕಕ್ಕೆ ಗರಿಷ್ಠ 1.00 ಲಕ್ಷ ರೂ ನೀಡಲಾಗುವುದು. |



Generated from eOffice by NAGARAJ MTB, C&I-MIN(NMTB), MINISTER, C&I SEC on 11/03/2022 09:55 AM